# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಯೋಜನಾ ಮಂಡಳಿಯ ಸರ್ಕಾರಿ ವಾಹನಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರಿ ಆದೇಶ ಸಂಖ್ಯೆ:ಪಿಡಿ 33 ಎಸ್ ಪಿಜಿ 2012, ದಿನಾಂಕ:2.9.2014.
2) ಪತ್ರ ಸಂಖ್ಯೆ:ಯೋಇ 22 ಎಸ್‌ಪಿಜಿ 2014, ದಿನಾಂಕ:23.9.2014.

**ಪ್ರಸ್ತಾವನೆ:**

ರಾಜ್ಯ ಯೋಜನಾ ಮಂಡಳಿಯಲ್ಲಿ ಒಬ್ಬ ವಾಹನ ಚಾಲಕರನ್ನು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಮೇಲೆ ಓದಲಾದ(1)ರ ಸರ್ಕಾರಿ ಆದೇಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಹೊರಗುತ್ತಿಗೆ ಆಧಾರದ ಮೇಲೆ ಒಬ್ಬ ವಾಹನ ಚಾಲಕರನ್ನು ನೇಮಕಾತಿ ಮಾಡಿಕೊಳ್ಳಲು ಮೇಲೆ ಓದಲಾದ(2)ರ ಪತ್ರದಲ್ಲಿ ವಿವಿಧ ಏಜೆನ್ಸಿಗಳಿಂದ ದರಪಟ್ಟಿಗಳನ್ನು ಪಡೆಯಲಾಗಿದೆ. ವಿವರ ಕೆಳಕಂಡಂತಿದೆ.

| ಏಜೆನ್ಸಿ ಹೆಸರು | ನಮೂದಿಸಿರುವ ಒಟ್ಟು ದರ |
|---|---|
| ಸ್ಟೇಟ್ ಸೆಕ್ಯೂರಿಟಿ ಸರ್ವೀಸ್ಸ್, ವಿದ್ಯಾರಣ್ಯ ನಗರ, ಮಾಗಡಿ ಮೈನ್ ರೋಡ್, ಬೆಂಗಳೂರು-23. | ರೂ.13,485-00 |
| ಸಿದ್ದೇಶ್ವರ ಮ್ಯಾನ್ ಪವರ್ ಕನ್ಸಲ್‌ಟೆಂಟ್, ಮಲ್ಲೇಶ್ವರಂ, ಬೆಂಗಳೂರು | ರೂ.14,278-29 |
| **ಸ್ಟಾರ್ ಎಂಪ್ಲಾಯ್ ಮೆಂಟ್ ಬ್ಯೂರೋ, ಸಂಪಂಗಿರಾಮನಗರ, ಬೆಂಗಳೂರು-27** | ರೂ.12,329-91 |

ಸ್ವೀಕೃತವಾದ ಮೇಲ್ಕಂಡ ಏಜೆನ್ಸಿಗಳ ದರಪಟ್ಟಿಗಳಲ್ಲಿ **ಸ್ಟಾರ್ ಎಂಪ್ಲಾಯ್ ಮೆಂಟ್ ಬ್ಯೂರೋ, ನಂ.8/1, 8ನೇ ಮೈನ್, GEO ಹೋಟೆಲ್ ರೋಡ್** ಎದುರು, ಸಂಪಂಗಿರಾಮನಗರ ಬೆಂಗಳೂರು-27 ಇವರು ಒಬ್ಬ ವಾಹನ ಚಾಲಕರಿಗೆ ಮಾಹೆಯಾನ ನಮೂದಿಸಿರುವ ದರ ರೂ.12,329-91 ಗಳಾಗಿದ್ದು ಉಳಿದ ಏಜೆನ್ಸಿಯವರು ನಮೂದಿಸಿರುವ ದರಗಳಿಗಿಂತ ಅತ್ಯಂತ ಕಡಿಮೆಯಾಗಿರುತ್ತದೆ. ಆದಕಾರಣ ಈ ಏಜೆನ್ಸಿಯನ್ನು ಆಯ್ಕೆ ಮಾಡಲಾಗಿರುತ್ತದೆ.

ಅದರಂತೆ, ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಪಿಡಿ 22 ಎಸ್‌ಪಿಜಿ 2014**
**ಬೆಂಗಳೂರು, ದಿನಾಂಕ:7ನೇ ಅಕ್ಟೋಬರ್ 2014**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಕಾರಣಗಳ ಹಿನ್ನೆಲೆಯಲ್ಲಿ ಒಬ್ಬ ವಾಹನ ಚಾಲಕರನ್ನು ರಾಜ್ಯ ಯೋಜನಾ ಮಂಡಳಿಗೆ ಹೊರಗುತ್ತಿಗೆ ಆಧಾರದ ಮೇಲೆ ದಿನಾಂಕ:7ನೇ ಅಕ್ಟೋಬರ್ 2014 ರಿಂದ ಜಾರಿಗೆ ಬರುವಂತೆ ಮುಂದಿನ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇವರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು **ಸ್ಟಾರ್ ಎಂಪ್ಲಾಯ್‌ಮೆಂಟ್ ಬ್ಯೂರೋ, ನಂ.8/1, 8ನೇ ಮೈನ್, GEO ಹೋಟೆಲ್ ರೋಡ್ ಎದುರು, ಸಂಪಂಗಿರಾಮನಗರ, ಬೆಂಗಳೂರು-27,** ಈ ಸಂಸ್ಥೆಯಿಂದ ಮಾಸಿಕ ರೂ.12,330/-ಗಳ (ಹನ್ನೆರಡು ಸಾವಿರದ ಮುನ್ನೂರ ಮುವತ್ತು ರೂಪಾಯಿಗಳಿಗೆ ಮಾತ್ರ) ವೆಚ್ಚದಲ್ಲಿ ಸೇವೆಯನ್ನು ಪಡೆಯಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

2. ಈ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2014-15ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ "3451-00-101-4-00-051(ಯೋಜನೇತರ) " ಅಡಿಯಲ್ಲಿ ಭರಿಸತಕ್ಕದ್ದು.

3. ಈ ಆದೇಶವನ್ನು ದಿನಾಂಕ:17.5.1997 ಸರ್ಕಾರದ ಆದೇಶ ಸಂಖ್ಯೆ:ಪಿಡಿ 113 ಎಸ್‌ಪಿಎಂ 96 ರನ್ವಯ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಅಧಿಕಾರದಡಿಯಲ್ಲಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

( ಎಸ್.ಎಸ್. ಜಯವರ )
ಸರ್ಕಾರದ ಅಧೀನ ಕಾರ್ಯದರ್ಶಿ-3,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ.
ದೂ:22032623
planningboard122@gmail.com

ಪ್ರತಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.

2. ಸರ್ಕಾರದ ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

3. ಸ್ಟಾರ್ ಎಂಪ್ಲಾಯ್ ಮೆಂಟ್ ಬ್ಯೂರೋ, ನಂ.8/1, 8ನೇ ಮೈನ್, GEO ಹೋಟೆಲ್ ರೋಡ್ ಎದುರು, ಸಂಪಂಗಿರಾಮನಗರ, ಬೆಂಗಳೂರು-27

4. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

5. ಸಹಾಯಕ ಆಡಳಿತಾಧಿಕಾರಿ, ರಾಜ್ಯ ಯೋಜನಾ ಮಂಡಳಿ.

6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.